**ಓ.ಎಸ್. ನಂಃ 238/2025**

**ಪಿ.ಡಬ್ಲ್ಯೂಃ 1**

**ದಿನಾಂಕ 09.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ.ಕೆ.ಎಲ್ ವಕೀಲರಿಂದಃ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿನಾಂಕಃ08.03.2025 ರ ಕಾನೂನು ತಿಳುವಳಿಕೆ ನೋಟಿಸ್ ಅನ್ನು ನಿಪಿ-1 ಎಂದು, ಅಂಚೆ ರಶೀದಿಯನ್ನು ನಿಪಿ-2 ಎಂದು, Postal track consignment issued by Post Master, Mysuru ನಿಪಿ-3 ಎಂದು, ಪಹಣಿಯನ್ನು ನಿಪಿ-4 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿಯು ದಿನಾಂಕಃ 06.04.2023 ರ ಫಸಲು ಸಾಗುವಳಿ ಭೋಗ್ಯ ಪತ್ರ ಎನ್ನುವ ದಾಖಲೆಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯ ಮೇಲೆ ನಿಗದಿತ ಮುದ್ರಾಂಕ ಶುಲ್ಕ ಹಾಗೂ ದಂಡ ಭರಿಸುವಂತೆ ಆದೇಶಕ್ಕಾಗಿ ಮುಂದೂಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**

**ಕೆ.ಆರ್.ನಗರ**